
## ನಕ್ಕುಬಿಡಿ



'ನಿಜ ಹೇಳಿ ಡಾಕ್ಟ್ರೆ, ನಾನು ಬದುಕುತ್ತೇನಾ...?'

'ನೂರಕ್ಕೆ ನೂರರಷ್ಟು ಬದುಕುತ್ತೀರಿ. ಏಕೆಂದರೆ, ಈ ಆಪರೇಷನ್ ಮಾಡಿಸಿಕೊಂಡವರಲ್ಲಿ ಹತ್ತರಲ್ಲಿ ಒಂಬತ್ತು ಜನ ಸಾಯುತ್ತಾರೆ. ಮತ್ತೆ ನಾನು ಆಪರೇಷನ್ ಮಾಡಿದ ಒಂಬತ್ತು ಜನರು ಈಗಾಗಲೇ ಸತ್ತಿದ್ದಾರೆ. ನೀವು ಹತ್ತನೆಯವರು.'

★★★

ಹೊಸದಾಗಿ ಮದುವೆಯಾದ ಗಂಡ– ಹೆಂಡತಿ ಹರಟೆ ಹೊಡೆಯುತ್ತಿದ್ದರು.

ಹೆಂಡತಿ: ಪ್ರಪಂಚದಲ್ಲಿ ಪ್ರೀತಿಯನ್ನು ಬಿಟ್ಟರೆ, ಬೇರೇನೂ ಇಲ್ಲವೇ ಇಲ್ಲ. ಅಲ್ವೇನ್ರಿ?

ಗಂಡ: ಇಲ್ಲ ಚಿನ್ನ ಬೇರೇನೂ ಇಲ್ಲ! ಅಂದ ಹಾಗೆ ಅಡುಗೆ ಏನಿವತ್ತು!

★★★



'ಏನಯ್ಯ ವಿಚಿತ್ರ, ಒಂದು ಕಾಲಿಗೆ ಕೆಂಪು, ಒಂದು ಕಾಲಿಗೆ ಹಸಿರು ಕಾಲುಚೀಲ ಹಾಕಿಕೊಂಡಿರುವೆಯಲ್ಲ'!

'ಇನ್ನೂ ವಿಚಿತ್ರ ಎಂದರೆ, ನಮ್ಮ ಮನೆಯಲ್ಲಿ ಇಂತಹುದೇ ಇನ್ನೂ ಒಂದು ಜೊತೆ ಇದೆ'

★★★

'ನಿನ್ನ ಹೆಂಡತಿ ಎಂತಹವಳು'?

'ಓಹ್, ಅವಳು ದೇವತೆ!'

'ನೀನೇ ಪುಣ್ಯವಂತನಪ್ಪ, ನನ್ನವಳು ಇನ್ನೂ ಬದುಕಿದ್ದಾಳೆ'!

★★★



'ಏನು ಹಳ್ಳ ತೋಡುತ್ತಿದ್ದೀಯಾ'?


'ಇಲ್ಲ, ಮಣ್ಣು ತೋಡುತ್ತಿದ್ದೇನೆ. ಹಳ್ಳ ಅದಾಗೇ ಆಗ್ತಾ ಇದೆ.'

★★★

'ಏನಯ್ಯ, ಎಲ್ಲರೂ ಆರು ಇಟ್ಟಿಗೆಗಳನ್ನು ಹೊರುತ್ತಿದ್ದರೆ, ನೀನು ಮೂರೇ ಇಟ್ಟಿಗೆಗಳನ್ನು ಹೊರುತ್ತಿದ್ದೀಯಲ್ಲ'?

'ಅವರೆಲ್ಲ ಸೋಮಾರಿಗಳು ಸ್ವಾಮಿ, ಎರಡೆರಡು ಸಾರಿ ಬರಬೇಕಾಗುತ್ತೆ ಅಂತ...'

(ಸಂಗ್ರಹ): ಎಂ.ಎಸ್. ನಾಗೇಂದ್ರ




ಮನುಷ್ಯರಂತೆ ವರ್ತಿಸಬೇಡಿ! ಅವಳನ್ನು ಹೋಗಲು ಬಿಡಿ!




ಆ ಕಡೆ ನೋಡಿ ಅಂತೀಯಲ್ಲೇ ರಸ್ತೆಗಳು ಹೊಂಡ– ತಗ್ಗುಗಳಿಂದ ಕೂಡಿವೆ, ಹುಷಾರಾಗಿ ನಾವು ಹೋಗೋದು ಬೇಡ್ವಾ?




ಆದ್ಯಾರಿಗೆ ಬೇಕಿತ್ತು ಮಾರಾಯ್ತಿ? ಅದರ ಬದ್ಲು 'ಅಡುಗೆ ಮಾಡುವ ರೋಬಾಟ್' ತಯಾರ್ಸಿದ್ರೆ ಚೆನ್ನಾಗಿತ್ತು..!